**ಕರ್ನಾಟಕ ಸರ್ಕಾರ**

**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶನಾಲಯ,
ಕಲ್ಯಾಣ-ಸುರಕ್ಷಾ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

ಸಂ. ಎಲ್‌ಜಿಎಲ್–2/ಇತರೆ/ಸಿಆರ್–82/2021–22 ದಿನಾಂಕ: 06–01–2022

# ಸುತ್ತೋಲೆ

ವಿಷಯ: ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಕಡ್ಡಾಯವಾಗಿ ಎರಡು ಡೋಸ್ ಲಸಿಕೆ ಕಡ್ಡಾಯ ಮತ್ತು ಕೆಲಸದ ಸ್ಥಳದಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂ. ಆರ್‌ಡಿ 158 ಟಿಎನ್‌ಆರ್ 2020 (3), ದಿ: 05–01–2022.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೊಂದಾಯಿತ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಎರಡು ಡೋಸ್ ಕೋವಿಡ್–19 ಲಸಿಕೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ ಮತ್ತು ಕೋವಿಡ್–19 ರ ಸೂಕ್ತವಾದ ನಡವಳಿಕೆಗಳಿಗೆ ಬದ್ಧರಾಗಿರತಕ್ಕದ್ದೆಂದು ಉಲ್ಲೇಖದಂತೆ ಆದೇಶವಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಈ ಕುರಿತು ಕಾರ್ಮಿಕ ಇಲಾಖೆಯು ಆರೋಗ್ಯ ಇಲಾಖೆಯೊಂದಿಗೆ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಕೋವಿಡ್–19 ಲಸಿಕೆ ಪಡೆದಿರುವ ಬಗ್ಗೆ ಮತ್ತು ಕೋವಿಡ್–19 ರ ಸೂಕ್ತವಾದ ನಡವಳಿಕೆಗಳ ಅನುಸರಣೆಯನ್ನು ಪರಿಶೀಲಿಸಲು ಆದೇಶವಾಗಿರುತ್ತದೆ. ಯಾವುದೇ ಕಾರ್ಮಿಕರು / ಆಡಳಿತ ವರ್ಗದವರು ಮೇಲಿನ ಆದೇಶವನ್ನು ಪರಿಪಾಲಿಸದಿದ್ದಲ್ಲಿ ಭಾರತ ದಂಡ ಸಂಹಿತೆಯ ಕಲಂ 188 ರಡಿಯಲ್ಲಿ ಕಾನೂನು ಕ್ರಮದ ಜೊತೆಗೆ ವಿಪತ್ತು ನಿರ್ವಹಣಾ ಕಾಯ್ದೆ, 2005 ರ ಕಲಂ 51 ರಿಂದ 60 ರವರೆಗಿನ ಪ್ರಾವಧಾನಗಳ ಅಡಿಯಲ್ಲಿ ಶಿಕ್ಷೆಗೆ ಒಳಪಡಿಸಬಹುದಾಗಿರುತ್ತದೆ ಎಂದು ಸದರಿ ಆದೇಶದಲ್ಲಿ ಉಲ್ಲೇಖಿಸಲಾಗಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಎಲ್ಲಾ ಕಾರ್ಖಾನೆಗಳ ಆಡಳಿತ ವರ್ಗದವರು ಅವರ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಎರಡು ಡೋಸ್ ಕೋವಿಡ್–19 ಲಸಿಕೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡು ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಹಾಗೂ ಕಾರ್ಖಾನೆಯಲ್ಲಿ ಕೋವಿಡ್–19 ರ ಸೂಕ್ತವಾದ ನಡವಳಿಕೆಗಳನ್ನು ಪರಿಪಾಲಿಸಿ ಕಾರ್ಯನಿರ್ವಹಿಸುವಂತೆ ಸೂಕ್ತ ಕ್ರಮತೆಗೆದುಕೊಳ್ಳಲು ಸೂಚಿಸಲಾಗಿದೆ.

ಈ ಬಗ್ಗೆ ಇಲಾಖೆಯ ಅಧಿಕಾರಿಗಳು ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲಿಸುವ ಸಮಯದಲ್ಲಿ ಅಗತ್ಯ ವಿವರ / ದಾಖಲೆಗಳನ್ನು ಒದಗಿಸಲು ಸಹ ಕೋರಲಾಗಿರುತ್ತದೆ

**(ಕೆ. ಶ್ರೀನಿವಾಸ್)**
ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

**ಇವರಿಗೆ,**

**ಎಲ್ಲಾ ಕಾರ್ಖಾನೆಯ ಆಡಳಿತ ವರ್ಗದವರಿಗೆ.**

## GOVERNMENT OF KARNATAKA

No. RD 158 TNR 2020 (3)

Karnataka Government Secretariat,
MS Building,
Bengaluru, Dated:05-01-2022

**ORDER**

In continuation with the Government Order No. RD 158 TNR 2020, dated:04-01-2022 and in exercise of the powers conferred under Section 24 (l) of the Disaster Management Act, 2005, the undersigned, in the capacity of Chairman, State Executive Committee, hereby directs Labour Department and Health Department to take following action with immediate effect:

- The Labour Department shall ensure that the employees working in Industries/factories, IT Industries, etc, are vaccinated with 2 doses of COVID 19 vaccine and strictly adhere to COVID 19 appropriate behaviour in their work place. The local Labour Officer along with Health Department official shall verify the Vaccine Status of the employees working in said establishments in their respective jurisdictions and also compliance to COVID 19 appropriate behaviour in the work place.
- Any employees/management violating these measures will be liable to be proceeded against as per the provisions of Section 5l to 60 of the Disaster Management Act, 2005, besides legal action under Section l88 of the IPC, and other legal provisions as applicable.

**(P Ravi Kumar)**
Chief Secretary and Chairman,
State Executive Committee

To:
The Compiler, Karnataka Gazette, Bengaluru